

ವಾರದ ರಿಮಾಂಡ್ ಪಡೆದರೆ, ಎಲ್ಲಾ ಸತ್ಯ ಹೊರಗೆಳೆದು, ಚಾರ್ಜ್‌ಶೀಟ್ ಹಾಕಬಹುದು ಎನ್ನುವ ಆಲೋಚನೆಯಲ್ಲಿದ್ದ.

"ಸರ್ ನಾವು ಅವಳನ್ನ ಕೊಲೆ ಮಾಡಿಲ್ಲ... ಅವಳು ನನ್ನ ಗಂಡನ ಪ್ರೇಯಸಿ..." ಎಂದಳು ಸುನಂದಾ ನಿಧಾನವಾಗಿ.

ಆಶ್ಚರ್ಯದಿಂದ ಕುಡಿಯುತ್ತಿದ್ದ ಲೋಟವನ್ನು ಕೆಳಗಿಟ್ಟು...

"ವಾಟ್!..." ಎಂದು ಎತ್ತರದ ಧ್ವನಿಯಲ್ಲಿ ಕೂಗಿದ.

ತಗ್ಗಿಸಿದ ತಲೆಯನ್ನು ಎತ್ತದೇ ನವೀನ್, "ಹೌದು ಸರ್... ಆ ಹುಡುಗಿಯ ಹೆಸರು, ಅನುಪಮಾ. ನಾನು ಸಿ.ಎಂ. ಸಾಫ್ಟ್‌ವೇರ್‌ನಲ್ಲಿ ವೈಸ್ ಪ್ರೆಸಿಡೆಂಟ್. ಅನು ನನ್ನ ಕೆಳಗಡೆ ಕೆಲಸ ಮಾಡಲು ಸೇರಿಕೊಂಡಿದ್ದಳು. ಕೆಲವೇ ದಿನಗಳಲ್ಲಿ ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸಲು ಪ್ರಾರಂಭಿಸಿದೆವು. ಆಫೀಸಿನಲ್ಲಿ ಕೇವಲ ಪ್ರೊಫೆಶನಲ್ ರಿಲೇಶನ್‌ಶಿಪ್ ಇಟ್ಟುಕೊಂಡು, ಹೊರಗಡೆ ಪ್ರೇಮಿಗಳಂತೆ ಇದ್ದೆವು. ಅದು ಹೇಗೋ ನಮ್ಮ ಬಗ್ಗೆ ತಿಳಿದುಕೊಂಡ ಇವಳು, ನಮ್ಮಿಬ್ಬರನ್ನು ಹಿಡಿದು ದೊಡ್ಡ ರಂಪಾಟ ಮಾಡಿದಳು. ಆ ಹೊತ್ತಿಗೆ ನನಗೂ ಅನುಪಮಾಳ ನಿಜವಾದ ಮುಖ ಗೊತ್ತಾಗಿತ್ತು. ತನ್ನ ಕರಿಯರ್‌ನಲ್ಲಿ ಮುಂದೆ ಬರಬೇಕು ಅಂತ ನನ್ನನ್ನು ಉಪಯೋಗಿಸಿಕೊಳ್ಳುತ್ತಿದ್ದಳು ಎಂದು ಅರಿವಾಗಿತ್ತು. ನನ್ನ ತಪ್ಪನ್ನು ಇವಳೆದುರಿಗೆ ಒಪ್ಪಿಕೊಂಡು ಕ್ಷಮೆ ಕೇಳಿದೆ. ಇದೆಲ್ಲ ತಿಳಿದ ಅನುಪಮಾ ನನ್ನನ್ನು ಬ್ಲಾಕ್‌ಮೇಲ್ ಮಾಡಲು ಯತ್ನಿಸಿದಳು. ಅದು ಸಾಧ್ಯವಾಗದಿದ್ದಾಗ, ಇಬ್ಬರೂ ಸೌಹಾರ್ದವಾಗಿ ಬಗೆಹರಿಸಿಕೊಂಡು ನಮ್ಮ ನಮ್ಮ ಜೀವನದಲ್ಲಿ ಮುಂದೆ ಸಾಗೋಣ ಎನ್ನುವ ನಿರ್ಧಾರಕ್ಕೆ ಬಂದೆವು. ಅವಳ ಹತ್ತಿರ ಇದ್ದ ನನ್ನ ವಸ್ತುಗಳನ್ನು ಕೊಟ್ಟು ನನ್ನ ಬಳಿಯಿದ್ದ ಅವಳ ವಸ್ತುಗಳನ್ನು ಪಡೆಯಲು ನೆನ್ನೆ ರಾತ್ರಿ ನಮ್ಮ ಮನೆಗೆ ಬಂದಿದ್ದಳು."

ಅಲ್ಲಿಯವರೆಗೂ ತಲೆ ತಗ್ಗಿಸಿ ಕೇಳಿಸಿಕೊಳ್ಳುತ್ತಿದ್ದ ಭೂಷಣ್ ತಲೆ ಎತ್ತಿ ನೋಡಿದ.

ಕೊಲೆಗೆ ಬೇಕಾಗಿದ್ದ ಮೋಟಿವ್! ತನಗೇ ಅರಿಯದಂತೆ ನವೀನ್ ಅದನ್ನು ಹೇಳಿದ್ದ!

ಕೊಲೆಯಾದವಳ ಜೊತೆ ಅವನಿಗಿದ್ದ ವಿವಾಹೇತರ ಸಂಬಂಧ!... ಅವಳು ಮಾಡುತ್ತಿದ್ದ ಬ್ಲಾಕ್‌ಮೇಲ್!

ಅವನ ಕಣ್ಣುಗಳು ಅರಳಿದವು.

"ನೆನ್ನೆ ರಾತ್ರಿ ಏನು ನಡೆಯಿತು?"

"ನೆನ್ನೆ ರಾತ್ರಿ ಸುಮಾರು ಎಂಟುಗಂಟೆಗೆ ಅನುಪಮಾ ನಮ್ಮ ಮನೆಗೆ ಬಂದಳು. ಅವಳೊಂದಿಗೆ ನನ್ನ, ಅವಳ, ಫೋಟೊ, ವಿಡಿಯೊ ಎಲ್ಲವನ್ನೂ ಪೆನ್‌ಡ್ರೈವ್‌ನಲ್ಲಿ ತಂದಿದ್ದಳು. ನಾವಿಬ್ಬರೂ ಸುನಂದಾ ಎದುರಿಗೆ ಅದನ್ನೆಲ್ಲಾ ವಿನಿಮಯ ಮಾಡಿಕೊಂಡು, ನಮ್ಮಿಬ್ಬರ ಇ–ಮೇಲ್, ಚಾಟ್‌ಗಳು ಎಲ್ಲವನ್ನೂ ಡಿಲಿಟ್ ಮಾಡಿದೆವು. ನಂತರ ಮೂರೂ ಜನ ವೈನ್ ಸೇವಿಸಿ ಊಟ ಮಾಡಿದೆವು. ಅನುಪಮಾ, ಸುಮಾರು ಒಂಬತ್ತುವರೆ ವೇಳೆಗೆ ನಮ್ಮ ಮನೆಯಿಂದ ಹೊರಟಳು. ನಾವಿಬ್ಬರೂ ಎಲ್ಲ ಸರಿಹೊಯಿತೆಂದು ಸಂತೋಷದಿಂದ ಇನ್ನೊಂದೆರಡು ಗ್ಲಾಸ್ ವೈನ್ ಕುಡಿದು, ಮಲಗಿದೆವು. ಸುಮಾರು ಹನ್ನೆರಡರ ವೇಳೆ, ಯಾರೋ ಚೀರಿದ ಶಬ್ದ ಕೇಳಿ ಎಚ್ಚರವಾಯಿತು. ವೈನ್‌ನ ನಶೆ ಇದ್ದುದರಿಂದ ಕೊಂಚ ನಿಧಾನವಾಗಿ ಕೆಳಗಿಳಿದು ಬಂದೆವು. ಬಾಗಿಲು ತೆರೆದರೆ ನಮಗೆ ಕಂಡಿದ್ದು ಅನುಪಮಾಳ ಶವ ರಕ್ತದ ಮಡುವಿನಲ್ಲಿ ಬಿದ್ದಿತ್ತು. ಅಕ್ಕಪಕ್ಕದ ಮನೆಯವರು ಸೇರಿದ್ದರು... ಎಲ್ಲಾ ನಮ್ಮನ್ನೇ ಕೊಲೆಗಾರರು ಅನ್ನುವ ರೀತಿಯಲ್ಲಿ ನೋಡುತ್ತಿದ್ದರು... ಮಿಕ್ಕಿದ್ದು ನಿಮಗೆ ಗೊತ್ತಿದೆ."

ಭೂಷಣ್, ಅವರಕಡೆ ವ್ಯಂಗ್ಯವಾಗಿ ನೋಡುತ್ತಾ...

"ಕತೆ ಚೆನ್ನಾಗಿದೆ... ಆದರೆ ನಂಬಲಿಕ್ಕೆ ಆಗದು. ಇದನ್ನೇ ನಿಮ್ಮ ಹೇಳಿಕೆ ಎಂದು ತೆಗೆದುಕೊಳ್ಳಲಾ...